# ಶ್ರೀಮಾತೆಯವರ ದಿವ್ಯಸ್ಮೃತಿ

ಮೂಲ ಬಂಗಾಳಿ : **ವಾಸನಾಬಾಲಾ ನಂದಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ವಾಸನಾಬಾಲಾ ನಂದಿಯವರ ಮನೆಯಿದ್ದುದು ಕಾಮಾರಪುಕುರದ ಮುಕುಂದಪುರದಲ್ಲಿ. ಅವರ ತಂದೆ ಅಧರಚಂದ್ರ ನಾಯಕ, ತಾಯಿ ಜ್ಯೋತಿ ಬಾಲಾ. ವಾಸನಾಬಾಲಾ ಅವರು ಜನಿಸಿದ್ದು ೧೮೯೯–೧೯೦೦ರಲ್ಲಿ. ಈಗ (ಅಂದರೆ ೧೯೯೬ರಲ್ಲಿ) ಅವರಿಗೆ ೯೬–೯೭ ವರ್ಷ. ೭ ವರ್ಷವಿದ್ದಾಗಲೇ ಅವರ ಮದುವೆ ಹೃಷೀಕೇಶ ನಂದಿಯವರೊಂದಿಗೆ ನಡೆಯಿತು. ಮದುವೆಯಾದ ಕೆಲವೇ ದಿನಗಳಲ್ಲಿ ಆಕೆ ವಿಧವೆಯಾದರು. ಅವರಿಗೆ ತಮ್ಮ ಪತಿಯ ನೆನಪಿದ್ದಿರಲಿಲ್ಲ , ಕೇವಲ ಹೆಸರು ಮಾತ್ರ ನೆನಪಿತ್ತು. ಹನ್ನೊಂದನೇ ವಯಸ್ಸಿನಲ್ಲಿ ಅವರು ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಯಲ್ಲಿ ಕೆಲಸ ಮಾಡಲಾರಂಭಿಸಿದರು. ಶ್ರೀಮಾತೆಯವರು ದೇಹತ್ಯಾಗ ಮಾಡುವವರೆಗೂ ಅವರು ಶ್ರೀಮಾತೆಯವರ ಬಳಿ ಇದ್ದರು. ಶ್ರೀಮಾತೆಯವರ ದಿವ್ಯ ಜೀವನದ ಅಪೂರ್ವ ಕ್ಷಣಗಳಿಗೆ ಸಾಕ್ಷಿಯಾಗಿ ಅವರು ಬಹಳ ದೀರ್ಘಕಾಲ ಬದುಕಿದ್ದರು.



**ನಾ**ನು ಶ್ರೀಮಾತೆಯವರ ಜೊತೆಗೆ ಬಹಳ ಕಾಲ ವಾಸ ಮಾಡಿದ್ದೆ – ಹತ್ತು ಅಥವಾ ಹನ್ನೊಂದು ವರ್ಷವಾದರೂ ಇದ್ದೆ. ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಯಲ್ಲಿ ನಾನು ಅವರ ಕೆಲಸ ಮಾಡುತ್ತಿದ್ದೆ. ನಾನು ಹೆಚ್ಚು ಕಾಲವಿದ್ದುದು ಜಯರಾಮಬಾಟಿಯಲ್ಲೇ. ಯಾವಾಗಲೋ ಒಮ್ಮೆ ಬಾಗ್‌ಬಜಾರಿನಲ್ಲಿದ್ದ 'ಮಾಯೇರ್ ಬಾಡಿ' (ಅಂದರೆ 'ಶ್ರೀಮಾತೆಯವರ ಮನೆ', 'ಉದ್ಬೋಧನ')ಯಲ್ಲಿ ಕೂಡ ತಂಗಿದ್ದೆ. ಶ್ರೀಮಾತೆಯವರನ್ನು ನಾನು 'ಮಾ' ಎಂದೇ ಕರೆಯುತ್ತಿದ್ದೆ. ಬಾಗ್‌ಬಜಾರಿನಲ್ಲಿ ಭರತ್ ಮಹಾರಾಜರಿಗೆ (ಸ್ವಾಮಿ ಅಭಯಾನಂದರು) ಮಂತ್ರದೀಕ್ಷೆ ನೀಡಿದ ದಿನವೇ, ಅವರ ದೀಕ್ಷೆಯ ಬಳಿಕ ಶ್ರೀಮಾತೆಯವರು ನನಗೂ ದೀಕ್ಷೆ ನೀಡಿದರು.[೧] ಅಂದು ಶ್ರೀಮಾತೆಯವರಿಂದ ಇನ್ನೂ ಒಂದಿಬ್ಬರು ದೀಕ್ಷೆ ಪಡೆದಿದ್ದರು. ಶ್ರೀಮಾತೆಯವರು ಕಾಮಾರಪುಕುರಕ್ಕೆ ಹೋದುದನ್ನು ನಾನು ಹೆಚ್ಚಾಗಿ ಕಂಡಿಲ್ಲ ; ಆದರೂ ಒಂದು ಸಲ ಶ್ರೀರಾಮಕೃಷ್ಣರ ಜಯಂತಿಯ ಸಂದರ್ಭದಲ್ಲಿ ಅಲ್ಲಿ ಮೂರು ದಿನ ತಂಗಿದ್ದುದು ನನಗೆ ನೆನಪಿದೆ. ನನ್ನ ತಂದೆ ಒಂದು ಕಾಲದಲ್ಲಿ ಶ್ರೀರಾಮಕೃಷ್ಣರ ಮನೆತನಕ್ಕೆ ಸೇರಿದ್ದ 'ಲಕ್ಷ್ಮೀಜಲಾ' ಎಂಬ ಗದ್ದೆಯಲ್ಲಿ ಕೃಷಿ ಮಾಡುತ್ತಿದ್ದರು. ಶ್ರೀರಾಮಕೃಷ್ಣರ ಸಂಬಂಧಿಕರು ಶ್ರೀಮಾತೆಯವರನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ, ಹಾಗಾಗಿ ಶ್ರೀಮಾತೆಯವರು ಕಾಮಾರಪುಕುರದಲ್ಲಿ ವಾಸ ಮಾಡಲಿಲ್ಲ. ಆದರೆ, ಶ್ರೀಮಾತೆಯವರ ಬಾಯಿಯಿಂದ ಎಂದೂ ಆ ಸಂಬಂಧಿಕರ ಬಗ್ಗೆ ಯಾವ ಮಾತುಗಳಾಗಲೀ ಹೊರಬಂದುದನ್ನು ಯಾರೂ ಕೇಳಿಲ್ಲ. ಅವರು ದೇವತೆಯೇ ಅಲ್ಲದಿದ್ದರೆ ಈ ರೀತಿ ಕ್ಷಮೆಯನ್ನು ಹೊಂದಿರುವುದು ಸಾಧ್ಯವೆ? ಶ್ರೀರಾಮಕೃಷ್ಣರ ಅಣ್ಣನ ಮಕ್ಕಳಾರೂ 'ಲಕ್ಷ್ಮೀ ಜಲಾ' ಗದ್ದೆಯಲ್ಲಿ ಬೆಳೆದ ಅಕ್ಕಿ, ಧಾನ್ಯಗಳನ್ನು ಸ್ವಲ್ಪವೂ ಶ್ರೀಮಾತೆಯವರಿಗೆ ಕೊಡುತ್ತಿರಲಿಲ್ಲ. ನನ್ನ ತಂದೆಯವರು 'ಲಕ್ಷ್ಮೀ ಜಲಾ' ಗದ್ದೆಯಲ್ಲಿ ಕೃಷಿ ಕೆಲಸ ಮಾಡುತ್ತಿದ್ದುದರಿಂದಲೇ ನಾನು ಅವರ ಬಾಯಿಯಿಂದ ಈ ಮಾತನ್ನು ಕೇಳಿದ್ದೆ. ಆದರೆ ಶ್ರೀಮಾತೆಯವರು ಎಂದೂ ಈ ಕುರಿತು ಏನನ್ನೂ ಹೇಳಿರಲಿಲ್ಲ. ನಾನು ಶ್ರೀಮಾತೆಯವರನ್ನು ಕೇಳುತ್ತಿದ್ದೆ, ''ನಿಮ್ಮ ಹಕ್ಕಿನ ವಸ್ತುವನ್ನು ಅವರು ನಿಮಗೆ ಏಕೆ ಕೊಡುತ್ತಿಲ್ಲ?'' ಎಂದು. ಶ್ರೀಮಾತೆಯವರು ಶಾಂತ ಭಾವದಿಂದ ಹೇಳುತ್ತಿದ್ದರು, ''ನೋಡಮ್ಮಾ, ಅಂಥ ಠಾಕೂರರೇ ಹೊರಟುಹೋದರು. ಇನ್ನು ಈ ಎರಡು ಮುಷ್ಟಿ ಅಕ್ಕಿ, ಧಾನ್ಯದಿಂದ ಏನು ಲಭಿಸುವುದು? ಅವರಿಗೆ ಇದನ್ನೆಲ್ಲ ಹೊಂದಿ ಸುಖವುಂಟಾಗುವುದಾದರೆ, ಅವನ್ನು ಇಟ್ಟುಕೊಳ್ಳಲಿ ಬಿಡು.''

ಶ್ರೀಮಾತೆಯವರು ಕಾಮಾರಪುಕುರದಲ್ಲಿದ್ದಾಗ ಎಷ್ಟೋ ದಿನ ಅನ್ನದೊಂದಿಗೆ ಪಲ್ಯ ಮಾಡಲು

---

[೧] ಭರತ್ ಮಹಾರಾಜರ ದೀಕ್ಷೆ ನಡೆದದ್ದು ೧೯೧೨ರಲ್ಲಿ. *(–ಸಂ)*

ತರಕಾರಿ ಹೊಂದಿಸಬೇಕಾದರೆ ಅವರಿಗೆ ತುಂಬಾ ಕಷ್ಟವಾಗು ತ್ತಿತ್ತು. ಶ್ರೀರಾಮಕೃಷ್ಣರ ಕೋಣೆಯ ಮುಂಭಾಗದಲ್ಲಿ ತುಸು ಜಾಗದಲ್ಲಿ ಅವರು ತಮ್ಮ ಕೈಯಿಂದಲೇ ಒಂದಿಷ್ಟು ತರಕಾರಿ ಬೆಳೆಯುತ್ತಿದ್ದರು. ಲಕ್ಷ್ಮೀ ದೀದಿ ಆ ತರಕಾರಿಗಳನ್ನು ಕಾಲಿನಿಂದ ತುಳಿದುಬಿಡುತ್ತಿದ್ದಳು. ಶ್ರೀಮಾತೆ ಬೇಡವೆಂದರೂ ಕೇಳದೆ, ಆಕೆ ಅವರೊಂದಿಗೆ ಜಗಳ ಮಾಡುತ್ತಿದ್ದಳು, ಕಟು ಮಾತುಗಳನ್ನು ಆಡುತ್ತಿದ್ದಳು. ಶ್ರೀಮಾತೆಯವರು ಅದನ್ನೆಲ್ಲ ಮೌನವಾಗಿ ಸಹಿಸಿ ಕೊಳ್ಳುತ್ತಿದರು. ಲಕ್ಷ್ಮೀ ಒಂದು ದಿನ ನನಗೆ ಹೇಳಿದ್ದಳು, ''ವಾಸನಾ, ಜಯರಾಮಬಾಟಿಯಲ್ಲಿ ಅಷ್ಟೊಂದು ಕಷ್ಟಪಟ್ಟು ಯಾಕೆ ಇದ್ದೀಯಾ? ಕೆಲಸ ಮಾಡಬೇಕೆಂದಿದ್ದರೆ ದಕ್ಷಿಣೇಶ್ವರದಲ್ಲಿ ಅಣ್ಣಂದಿರ ಬಳಿಗೆ ಹೋಗಿ ಇರು. ಹಾಗಿದ್ದರೆ ನಿನಗೆ ಹೊಟ್ಟೆ ತುಂಬಾ ಊಟ ಮಾಡಬಹುದು, ಚೆನ್ನಾಗಿ ಬಟ್ಟೆಬರೆ ತೊಡ ಬಹುದು.'' ನಾನಂದಿದ್ದೆ: ''ಅದಾಗದು. ಶ್ರೀಮಾತೆಯವರ ಬಳಿಯಲ್ಲಿ ನಾನು ತುಂಬ ಆನಂದದಿಂದ ಇದ್ದೇನೆ. ಅವರನ್ನು ಬಿಟ್ಟು ನಾನು ಎಲ್ಲಿಗೂ ಹೋಗಲಾರೆ.''

ಶ್ರೀರಾಮಕೃಷ್ಣರ ಸಂಬಂಧಿಕರ ಕಡೆಯವರು ಶ್ರೀಮಾತೆ ಯವರನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ ಎಂಬ ಕಾರಣದಿಂದಲೇ ಅವರು ತಮ್ಮ ತವರುಮನೆ ಜಯರಾಮಬಾಟಿಗೆ ಬಂದು ಅಲ್ಲಿರ ಬೇಕಾಯಿತು. ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಕಾಮಾರ ಪುಕುರದಲ್ಲಿ ವಾಸ ಮಾಡಲು ಹೇಳಿದ್ದರು. ಅವರು ದೇಹತ್ಯಾಗ ಮಾಡಿದ ನಂತರ, ಶ್ರೀಮಾತೆಯವರು ಕೆಲವು ವರ್ಷ ಕಾಮಾರ ಪುಕುರದಲ್ಲಿದ್ದರು; ಆದರೆ ಅಲ್ಲಿನವರು ಅವರನ್ನು ಚೆನ್ನಾಗಿ ನೋಡಿಕೊಳ್ಳದ ಕಾರಣ ಅವರು ಅಲ್ಲಿ ವಾಸ ಮಾಡಲಾಗಲಿಲ್ಲ. ಶ್ರೀಮಾತೆಯವರ ತಾಯಿಗೆ ಆ ಸುದ್ದಿ ತಿಳಿದಾಗ, ಅವರು ಬಲ ವಂತ ಮಾಡಿ ಶ್ರೀಮಾತೆಯವರನ್ನು ಜಯರಾಮಬಾಟಿಗೆ ಕರೆದು ಕೊಂಡು ಹೋದರು. ಕಾಮಾರಪುಕುರದಲ್ಲಿ ಇತರರೂ ಶ್ರೀಮಾತೆ ಯವರಿಗೆ ತೊಂದರೆ ಕೊಡುತ್ತಿದ್ದರು. ಅವರ ಹಿಂದೆ ಶ್ರೀರಾಮ ಕೃಷ್ಣರ ಬಂಧುಗಳ ಪ್ರೇರಣೆಯೂ ಇತ್ತೆಂದು ನನ್ನ ತಂದೆ ಹೇಳು ತ್ತಿದ್ದರು. ಕಾಮಾರಪುಕುರದ ಲಾಹಾ ಮನೆತನದ ಪ್ರಸನ್ನಮಯಿ ಹಾಗೂ ಇನ್ನು ಒಂದಿಬ್ಬರು ಮಾತ್ರ ಶ್ರೀಮಾತೆಯವರನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರಷ್ಟೇ ಶ್ರೀಮಾತೆ ಯವರ ಕಷ್ಟ-ಸುಖ ವಿಚಾರಿಸಿಕೊಳ್ಳುತ್ತಿದ್ದರು.

ಶ್ರೀರಾಮಕೃಷ್ಣರಿಗೆ ಯಾವುದೇ ರೀತಿಯ ಜಾತಿಭೇದ ಭಾವ ವಿರಲಿಲ್ಲ ಎಂದು ನನ್ನ ತಂದೆಯವರಿಂದ ನಾನು ಕೇಳಿದ್ದೆ. ಈ ಕಾರಣದಿಂದ ಗ್ರಾಮದ ಬ್ರಾಹ್ಮಣೇತರ ಜನರು ಅವರೊಂದಿಗೆ ಮಾತುಕತೆ ನಡೆಸುತ್ತಿದ್ದರು. ಆದರೂ ಹಳ್ಳಿಯ ಕೆಳವರ್ಗದ ಜನರು ಅವರನ್ನು 'ಗದಾಯ್ ಠಾಕೂರ್' ಎಂದು ಅಜ್ಞಾನವಶ ರಾಗಿ ಕರೆಯುತ್ತಿದ್ದರು! ಬ್ರಾಹ್ಮಣರು ಹೇಳುತ್ತಿದ್ದರು, ''ಇವನ ತಂದೆ ಹೇಗಿದ್ದ, ಈ ಹುಡುಗ ಹೇಗಾದ! ಶೂದ್ರರ ಮನೆಗೂ ಹೋಗಿ ತಿಂಡಿ, ಊಟ ಮಾಡುತ್ತಾನೆ! ಇವನೆಂಥ ಬ್ರಾಹ್ಮಣರ ಹುಡುಗ?'' ಅವರು ಚಿನ್ನು ಶಾಂಖಾರಿಯ ಮನೆಗೆ ಹೋಗಿ ತಿಂಡಿ, ಊಟ ಮಾಡುತ್ತಿದ್ದರು ಎಂದು ಬ್ರಾಹ್ಮಣರು ಚಿನ್ನು ಶಾಂಖಾರಿಯನ್ನೂ ಬಯ್ಯುತ್ತ, ಲೇವಡಿ ಮಾಡುತ್ತ ನಿಂದಿಸು ತ್ತಿದ್ದರು. ಕೇವಲ ಶೂದ್ರರ ಜೊತೆಗಷ್ಟೇ ಅಲ್ಲ, ಮುಸಲ್ಮಾನರ ಜೊತೆಗೂ ಶ್ರೀರಾಮಕೃಷ್ಣರು ಆತ್ಮೀಯವಾಗಿದ್ದರು. ಅವರ ಮನೆಗೂ ಹೋಗುತ್ತಿದ್ದರು.

ಅಂತೆಯೇ, ಕಾಮಾರಪುಕುರದ ಭೂತು ಶೇಖ್, ಮಂದಾ ರಣ್ ಗ್ರಾಮದ ಮಿಂಜಾ ಮುಂತಾದವರು ಜಯರಾಮಬಾಟಿಗೆ ಶ್ರೀಮಾತೆಯವರನ್ನು ಭೇಟಿಯಾಗಲು ಬರುತ್ತಿದ್ದರು.

ಶ್ರೀರಾಮಕೃಷ್ಣರ ಸ್ನೇಹಿತರಾಗಿದ್ದವರಲ್ಲಿ ಲಾಹಾ ಮನೆತನದ ರಾಮದಾಸ ಹಾಗೂ ಯೋಗೀಂದ್ರ, ಭೂತೋರ್ ಮನೆಯ ದುಃಖೀರಾಮ, ಲಾಯೇಕ್ ಮನೆತನದ ಶಿವು (ಶಿವಪ್ರಸಾದ್) ಹಾಗೂ ಮೋಡಲ್ ಮನೆಯ ನಟವರ ಮುಂತಾದವರನ್ನು ನಾನು ನೋಡಿದ್ದೇನೆ. ನಾನು ಕಾಮಾರಪುಕುರಕ್ಕೆ ಹೋದಾಗ, ಅವರ ಸುದ್ದಿ ತಿಳಿದುಬರಲು ಶ್ರೀಮಾತೆ ನನಗೆ ಹೇಳುತ್ತಿದ್ದರು. ನಾನು ಪ್ರಸನ್ನಮಯಿಯನ್ನೂ ನೋಡಿದ್ದೇನೆ. ಆಗ ಅವರು ಹಾಗೂ ಶ್ರೀರಾಮಕೃಷ್ಣರ ಜೊತೆಗಾರರೆಲ್ಲರೂ ತುಂಬ ವೃದ್ಧ ರಾಗಿದ್ದರು. ಅವರು ಶ್ರೀಮಾತೆಯವರನ್ನು ಭೇಟಿಯಾಗಲು ಜಯರಾಮಬಾಟಿಗೂ ಬರುತ್ತಿದ್ದರು. ಅವರು ಶ್ರೀಮಾತೆಯವ ರಿಗೆ ಪ್ರಣಾಮ ಮಾಡಲು ಹೋದರೆ, ಅವರು ಪ್ರಣಾಮ ಸ್ವೀಕರಿಸುತ್ತಿರಲಿಲ್ಲ. ''ನೀವೆಲ್ಲರೂ ಠಾಕೂರರ ಜೊತೆಗಾರರು; ಅವರ ವಯಸ್ಸಿನವರು. ನಿಮ್ಮ ಪ್ರಣಾಮವನ್ನು ನಾನು ಹೇಗೆ ಸ್ವೀಕರಿಸಲಿ?'' ಎನ್ನುತ್ತಿದ್ದರು.

ಎಷ್ಟೋ ಜನ್ಮಗಳ ಭಾಗ್ಯದಿಂದಾಗಿ ನಾನು ಶ್ರೀಮಾತೆಯವರ ಸೇವೆ ಮಾಡುವ ಅವಕಾಶ ಪಡೆದಿರುವೆ; ಹಾಗೂ ಅವರ ಪಾದ ಗಳನ್ನು ಸ್ಪರ್ಶ ಮಾಡುವ ಅವಕಾಶ ಪಡೆದಿದ್ದೇನೆ. ಶ್ರೀಮಾತೆ ಯವರ ಪಾತ್ರೆಗಳನ್ನು ತೊಳೆಯುವುದು, ನೆಲ ಒರೆಸುವುದು, ಅಂಗಡಿಯಿಂದ ಸಾಮಾನು ತರುವುದು - ಹೀಗೆ ಅನೇಕ ಕೆಲಸ ಗಳನ್ನು ನಾನು ಮಾಡುತ್ತಿದ್ದೆ. ರಾತ್ರಿಹೊತ್ತು ಶ್ರೀಮಾತೆಯವರ ಕಾಲುಗಳಿಗೆ ವಾತದ ತೈಲ ಹಚ್ಚಿ ಮಾಲಿಷ್ ಮಾಡುತ್ತಿದ್ದೆ ಕೂಡ. ಅದೆಂಥ ಪಾದಗಳು! ಹತ್ತಿಯಂತೆ ಮೃದುವಾಗಿದ್ದವು. ಮನುಷ್ಯ ಮಾತ್ರರ ಪಾದಗಳು ಹಾಗಿರಲಾರವು! ಕಾಮಾರಪುಕುರದ ದುರ್ಗಾ ಮಯರಾ ಅವರ ಜಿಲೇಬಿ ಹಾಗೂ ಸತೀಶ ಮಯರಾ ಅವರ ಅಂಗಡಿಯ ಲಾಡು ಅಂದರೆ ಶ್ರೀರಾಮಕೃಷ್ಣರಿಗೆ ತುಂಬ ಪ್ರಿಯ. ಶ್ರೀಮಾತೆಯವರು ಆಗಾಗ ಕಾಮಾರಪುಕುರದಿಂದ ಇವನ್ನೆಲ್ಲ ತರಿಸಿ ಜಯರಾಮಬಾಟಿಯಲ್ಲಿ ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡುತ್ತಿದ್ದರು. ಕಾಮಾರಪುಕುರದ ಬ್ರಾಹ್ಮಣರಲ್ಲಿ ಉಪೇನ್ ಘೋಷಾಲ್, ಪ್ರಸನ್ನ ಘಟಕ್, ಸತ್ಯ ಮುಖರ್ಜಿ ಮುಂತಾದವರು ಶ್ರೀಮಾತೆಯವರ ಬಗ್ಗೆ ಕೇಳಿ ತಿಳಿದುಕೊಳ್ಳು ತ್ತಿದ್ದುದನ್ನು ಕಂಡಿದ್ದೇನೆ. ಅವರಿಗೆ ಶ್ರೀಮಾತೆಯವರ ಮೇಲೆ

ಶ್ರದ್ಧೆ, ಭಕ್ತಿ ಇತ್ತು. ಶ್ರೀಮಾತೆಯವರು ಕೊನೆಯ ಬಾರಿಗೆ ಜಯರಾಮಬಾಟಿಯಿಂದ ಕಲ್ಕತ್ತೆಗೆ ಹೋದಾಗ, ಉಳಿದವರೊಂದಿಗೆ ನಾನೂ ಬಾಗ್‌ಬಜಾರಿಗೆ ಹೋಗಿದ್ದೆ. ಈ ಬಾರಿ ಶ್ರೀಮಾತೆ ಕಾಯಿಲೆಯಿಂದ ತುಂಬಾ ಕಷ್ಟಪಟ್ಟಿದ್ದರು. ಅವರು ನಮ್ಮನ್ನೆಲ್ಲ ತೊರೆದು ದೂರ ಹೋದ ದಿನದ ಮರುದಿನ ಬೇಲೂರು ಮಠದಲ್ಲಿ ಚಿತೆಯನ್ನು ಉರಿಸಿದ ಮೇಲೆ ಅದೆಂಥ ಮಳೆ! ಆಲಿಕಲ್ಲು ಮಳೆಯಾಗಿತ್ತು. ಆಕಾಶ, ವಾಯು, ಭೂಮಿ ಎಲ್ಲವೂ ಮಳೆಯಲ್ಲಿ ತೇಲಿಹೋಗಿತ್ತು. ಎಲ್ಲವೂ ಶ್ರೀಮಾತೆಯವರನ್ನು ಅಗಲಿದ ದುಃಖದಿಂದ ಅಳುತ್ತಿರುವಂತೆ ಭಾಸವಾಗಿತ್ತು. ಕೆಲವು ದಿನ ಬಾಗ್‌ಬಜಾರಿನಲ್ಲಿ ತಂಗಿದ್ದ ನನ್ನನ್ನು ಮಹಾರಾಜರೇ ಕಾಮಾರಪುಕುರಕ್ಕೆ ಕಳುಹಿಸಲು ವ್ಯವಸ್ಥೆ ಮಾಡಿದರು.

ಶ್ರೀಮಾತೆಯವರ ಮನೆಯಲ್ಲಿ ನಾನು ಪಾತ್ರೆ ತೊಳೆಯುತ್ತಿದ್ದೆ; ಕೋಣೆ, ಬಾಗಿಲು ಇತ್ಯಾದಿಗಳನ್ನೆಲ್ಲ ಸ್ವಚ್ಛಗೊಳಿಸುತ್ತಿದ್ದೆ. ಶ್ರೀಮಾತೆಯವರು ಅಡುಗೆ ಮಾಡುತ್ತಿದ್ದರು, ಧಾನ್ಯ ಇತ್ಯಾದಿಗಳನ್ನು ಸಿದ್ಧಗೊಳಿಸುತ್ತಿದ್ದರು. ಶ್ರೀಮಾತೆಯವರ ಅಡುಗೆ ಅತ್ಯಂತ ರುಚಿಕಟ್ಟಾಗಿರುತ್ತಿತ್ತು. ಹಿಂಗು ಸೇರಿಸಿ ಚಚ್ಚಡಿ ಪಲ್ಯ ಹಾಗೂ ಪಾಲಕ್ ಸೊಪ್ಪಿನ ಹುಳಿ ಇವನ್ನು ಶ್ರೀಮಾತೆ ತಯಾರು ಮಾಡುತ್ತಿದ್ದರು. ಅವರು ಎಂತಹ ಅಮೃತವನ್ನು ಅಡುಗೆ ಮಾಡುತ್ತಾರೆ ಎಂಬುದನ್ನು ವರ್ಣಿಸಿ ಹೇಳಲಾಗದು! ರಾತ್ರಿ ಹೊತ್ತು ಆಗಾಗ ಅವರು ಕಡಲೆಪುರಿ, ನೀರು ಸೇವಿಸುತ್ತಿದ್ದರು.

ಶ್ರೀಮಾತೆಯವರ ದೇಹದ ಬಣ್ಣ ಉಜ್ವಲ ಕಪ್ಪು ಬಣ್ಣದಿಂದ ಕೂಡಿತ್ತು. ಅವರ ತಲೆಗೂದಲು ಕೂಡ ಉದ್ದವಾಗಿ, ದಟ್ಟವಾಗಿತ್ತು. ನನ್ನ ಸಣ್ಣ ವಯಸ್ಸಿನಲ್ಲೇ ನನ್ನ ತಂದೆ, ತಾಯಿ ಹಾಗೂ ಪತಿ ತೀರಿಕೊಂಡಿದ್ದರು. ಆದ್ದರಿಂದ ನನಗೆ ನನ್ನವರು ಯಾರೂ ಇರಲಿಲ್ಲ. ಶ್ರೀಮಾತೆಯವರು ಹೇಳುತ್ತಿದ್ದರು, ''ನಿನ್ನನ್ನು ಯಾರಾದರೂ ಕದ್ದುಕೊಂಡು ಹೋದರೂ ಹುಡುಕುವವರಿಲ್ಲ, ನೀನು ಸತ್ತರೂ ಅಳುವವರಿಲ್ಲ'' ಅಂತ.

ಶ್ರೀಮಾತೆಯವರು ಬೆಕ್ಕುಗಳನ್ನು ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು. ಒಂದು ಬಾರಿ ಶ್ರೀಮಾತೆಯವರು ಊಟಕ್ಕೆ ಕುಳಿತಿದ್ದರು. ಇನ್ನೂ ಊಟ ಮಾಡಲು ತೊಡಗಿರಲಿಲ್ಲ. ನನಗೂ ಅನ್ನ ಬಡಿಸಿದ್ದಾಗಿದೆ. ಬೆಕ್ಕಿಗೆ ಅನ್ನ ಹಾಕಿರಲಿಲ್ಲ. ಒಂದು ಬೆಕ್ಕು ಅಲ್ಲಿಗೆ ಬಂದು, ನನಗೆ ಬಡಿಸಿದ್ದ ಅನ್ನವನ್ನು ತಿನ್ನತೊಡಗಿತು. ಆದರೆ ಶ್ರೀಮಾತೆಯವರು ಬೆಕ್ಕನ್ನು ಓಡಿಸಲಿಲ್ಲ. ನನಗೆ ಹೇಳಿದರು: ''ವಾಸನಾ, ನೀನು ನನ್ನ ಅನ್ನವನ್ನು ಊಟಮಾಡು.'' ಅವರಿಗಾಗಿ ಬಡಿಸಿದ್ದ ಅನ್ನವನ್ನು ನಾನು, ಶ್ರೀಮಾತೆ ಇಬ್ಬರೂ ತಿಂದೆವು. ಆದಕಾರಣ, ಈಗಲೂ ಕೂಡ ಬೆಕ್ಕಿಗೆ ತಿನ್ನಿಸಿದ ನಂತರವೇ ನಾನು ಊಟ ಮಾಡುತ್ತೇನೆ.

ಶ್ರೀರಾಮಕೃಷ್ಣರ ಅಂತರಂಗ ಶಿಷ್ಯಂದಿರಲ್ಲಿ ರಾಖಾಲ್ ಮಹಾರಾಜ್ (ಸ್ವಾಮಿ ಬ್ರಹ್ಮಾನಂದ), ಬಾಬುರಾಮ ಮಹಾರಾಜ್ (ಸ್ವಾಮಿ ಪ್ರೇಮಾನಂದ), ಮಹಾಪುರುಷ ಮಹಾರಾಜ್ (ಸ್ವಾಮಿ ಶಿವಾನಂದ), ಶರತ್ ಮಹಾರಾಜ್ (ಸ್ವಾಮಿ ಶಾರದಾನಂದ) ಹಾಗೂ ಮಾಸ್ಟರ್ ಮಹಾಶಯ (ಮ) ಇವರನ್ನು ನಾನು ನೋಡಿದ್ದೇನೆ. ನಾನು ಶ್ರೀಮಾತೆಯವರ ಬಳಿ ಕೆಲಸ ಮಾಡುತ್ತಿದ್ದೆ ಎಂಬ ಕಾರಣದಿಂದ ಅವರೆಲ್ಲ ನನ್ನನ್ನು ತುಂಬ ಅಕ್ಕರೆಯಿಂದ ಕಾಣುತ್ತಿದ್ದರು.

ಆಗ ನನಗೆ ೧೨-೧೩ ವರ್ಷ ವಯಸ್ಸು. ಒಂದು ದಿನ ಜಯರಾಮಬಾಟಿಯಲ್ಲಿ ನಾನು ಪಕ್ಕದ ಹಳ್ಳಿಯಲ್ಲಿ ದುರ್ಗಾಪೂಜೆ ನೋಡಲು ಹೋಗಬೇಕೆಂದು ಶ್ರೀಮಾತೆಯವರ ಬಳಿ ಹಠ ಹಿಡಿದು ಅತ್ತುಕೊಂಡಿದ್ದೆ. ಶ್ರೀಮಾತೆಯವರು ನನ್ನನ್ನು ಒಬ್ಬಂಟಿಯಾಗಿ ಹೋಗಲು ಬಿಡಲೇ ಇಲ್ಲ. ರಾತ್ರಿ ಹೊತ್ತು ಅವರ ಕಾಲಿಗೆ ವಾತದ ತೈಲ ಹಚ್ಚಿ ಮಾಲಿಷ್ ಮಾಡುವಾಗ ಶ್ರೀಮಾತೆಯವರು ಅತ್ಯಂತ ಪ್ರೀತಿಯಿಂದ ನನಗೆಂದರು: ''ನೀನು ಏನನ್ನು ನೋಡಬೇಕೆಂದು ಅಷ್ಟೊಂದು ಆಸೆಪಡುತ್ತಿದ್ದೀಯೋ, ಅದನ್ನು ಇಲ್ಲಿ ಕುಳಿತುಕೊಂಡೇ ನೋಡುವೆ.'' ಅಂದು ರಾತ್ರಿಯೇ ಶ್ರೀಮಾತೆಯವರು ನನಗೆ ತಮ್ಮ ಜಗದ್ಧಾತ್ರೀ ರೂಪವನ್ನು ತೋರಿಸಿದರು. ಆ ರೂಪ ಭಯಂಕರವಾಗಿರಲಿಲ್ಲ; ಅತ್ಯಂತ ಸ್ನಿಗ್ಧ, ಸುಂದರ ರೂಪವದು. ಅದೆಂಥ ರೂಪ! ಎಂಥ ಐಶ್ವರ್ಯ! ಅದನ್ನು ಕಣ್ಣುಗಳಲ್ಲಿ ತುಂಬಿಕೊಳ್ಳಲಾಗಲಿಲ್ಲ. ಆದರೆ, ಕಣ್ಣು ಮುಚ್ಚಿದರೆ, ನನ್ನ ಮನಸ್ಸಿನಲ್ಲಿ ಇಂದಿಗೂ ಅದೇ ರೂಪ ಮೂಡಿಬರುವುದು.

ಅಂದು ನಾನು ಶ್ರೀಮಾತೆಯವರ ಕಾಲುಗಳಿಗೆ ವಾತದ ತೈಲ ಹಚ್ಚಿ ಮಾಲಿಷ್ ಮಾಡುತ್ತ ಯಾವಾಗಲೋ ನಿದ್ದೆಗೆ ಸರಿದಿದ್ದೆ. ಹಠಾತ್ತನೆ ನಿದ್ರಾಭಂಗವುಂಟಾಯಿತು. ಕಣ್ಣುಬಿಟ್ಟು ನೋಡಿದರೆ, ಸುತ್ತಲೂ ಬೆಳಕೆಂದರೆ ಬೆಳಕು. ಅಷ್ಟೊಂದು ಬೆಳಕನ್ನು ನನ್ನ ಜೀವನದಲ್ಲಿ ನಾನೆಂದಿಗೂ ನೋಡಿರಲಿಲ್ಲ. ಕೋಣೆಯೆಲ್ಲವೂ ಬೆಳಕಿನಿಂದ ಥಳಥಳಿಸುತ್ತಿದ್ದಂತೆ ಅನ್ನಿಸಿತು: ಆ ಬೆಳಕಿನ ನಡುವೆ ಜಗದ್ಧಾತ್ರೀ ಮಾತೆ ಜೀವಂತವಾಗಿ ಕುಳಿತಿದ್ದಳು. ಆದರೆ ಶ್ರೀಮಾತೆಯವರು ಎಲ್ಲೂ ಕಾಣಿಸಲಿಲ್ಲ. ನನಗೆ ಭಯವುಂಟಾಗಿ, ''ಅಮ್ಮಾ, ಅಮ್ಮಾ'' ಎನ್ನುತ್ತ ಬಾಗಿಲಿನ ಚಿಲಕ ತೆಗೆದು ಹೊರಬಂದೆ. ಎಲ್ಲೂ ಶ್ರೀಮಾತೆಯವರು ಕಾಣಿಸಲಿಲ್ಲ. ಮತ್ತೆ ಕೋಣೆಯೊಳಕ್ಕೆ ಬಂದೆ. ಶ್ರೀಮಾತೆಯವರು ಹೇಗೆ ಮಲಗಿದ್ದರೋ, ಹಾಗೆಯೇ ಇದ್ದರು. ಅವರು ನಿದ್ರಿಸುತ್ತಿದ್ದರು. ಈಗ ಕೋಣೆಯಲ್ಲಿ ಹಿಂದಿನಂತೆ ಬೆಳಕಿರಲಿಲ್ಲ. ಒಂದು ಮೂಲೆಯಲ್ಲಿ ಹ್ಯಾರಿಕೆನ್ ಲಾಟೀನು ಸಣ್ಣಗೆ ಉರಿಯುತ್ತಿತ್ತು. ನಾನು ಶ್ರೀಮಾತೆಯವರನ್ನು ಕರೆದೆ. ಶ್ರೀಮಾತೆ ಎದ್ದು ಹೇಳಿದರು, ''ನೀನು ನೋಡಿದೆಯಲ್ಲ?'' ನಾನೇನು ನೋಡಿದೆನೋ, ಅದೆಲ್ಲವನ್ನೂ ಹೇಳಿದೆ. ಶ್ರೀಮಾತೆಯವರು ಮಧುರವಾಗಿ ನಗುತ್ತ ಹೇಳಿದರು, ''ನೀನೇನು ನೋಡಿದೆಯೋ, ಅದೆಲ್ಲವೂ ಸತ್ಯ. ನಾನೇ ಜಗದ್ಧಾತ್ರಿ, ನಾನೇ ದುರ್ಗೆ, ನಾನೇ ಲಕ್ಷ್ಮಿ, ನಾನೇ ಸರಸ್ವತಿ, ನಾನೇ ಕಾಳಿ.''

ಶ್ರೀಮಾತೆಯವರು ವಾತದ ಕಾಯಿಲೆಯಿಂದಾಗಿ ತುಂಬಾ ನೋವು ಅನುಭವಿಸಿದರು. ಅದಲ್ಲದೆ, ಅವರಿಗೆ ಆಮಶಂಕೆ ಕೂಡ

ಉಂಟಾಗಿತ್ತು. ನಾನು ಅವರ ಕಾಲುಗಳಿಗೆ ವಾತದ ಎಣ್ಣೆ ಹಚ್ಚಿ ಮಾಲಿಷ್ ಮಾಡಿದಂತೆಯೇ, ಆಮಶಂಕೆಗೂ ಎಣ್ಣೆ ಹಚ್ಚಿಕೊಡುತ್ತಿದ್ದೆ. ಶ್ರೀಮಾತೆಯವರ ಪಾದಗಳ ತಳಭಾಗದಲ್ಲಿ ತಾವರೆ ಹೂವಿನಂಥ ಒಂದು ಚಿಹ್ನೆಯಿತ್ತು. ಪಾದಗಳಿಗೆ ಎಣ್ಣೆ ಹಚ್ಚುವಾಗ ನಾನು ಅದನ್ನು ತುಸು ಚಿವುಟುತ್ತಿದ್ದೆ. ಶ್ರೀಮಾತೆಯವರು ನಗುತ್ತ ಹೇಳುತ್ತಿದ್ದರು, ''ಚಿವುಟಿದರೆ ನಿನಗೇನು ಸಿಗುತ್ತದೆ?''

ನಾನು ಕನಸಿನಲ್ಲಿ ಶ್ರೀರಾಮಕೃಷ್ಣರನ್ನು ಅನೇಕ ಬಾರಿ ನೋಡಿದ್ದೇನೆ. ಒಂದು ದಿನ ಅವರು ಕನಸಿನಲ್ಲಿ ನನಗೆ ಮಂತ್ರವನ್ನು ನೀಡಿದ್ದರು. ನನ್ನ ಕಿವಿಯಲ್ಲಿ ಫೂ ಎಂದು ಊದಿ ಅವರು ಹೀಗೆ ಹೇಳಿದ್ದರು – ''ಹರಿಯೇ ಗುರು – ಗುರುವೇ ಹರಿ. ಈ ಮಂತ್ರವನ್ನು ಎಲ್ಲರಿಗೂ ಹೇಳು. ಆದರೆ ನಿನ್ನ ತಾಯಿ (ಶ್ರೀಮಾತೆ) ನಿನಗೆ ಕೊಟ್ಟ ಮಂತ್ರವನ್ನು ಮಾತ್ರ ಯಾರಿಗೂ ಹೇಳಬೇಡ.'' ಈ ವಯಸ್ಸಿನಲ್ಲೂ ನನಗೆ ಕಿವಿ ಚೆನ್ನಾಗಿ ಕೇಳಿಸುತ್ತಿದೆ. ಠಾಕೂರರು ನನ್ನ ಕಿವಿಯಲ್ಲಿ ಊದಿದ್ದರಿಂದಲೇ ನನ್ನ ಕಿವಿ ಇಷ್ಟೊಂದು ಚೆನ್ನಾಗಿದೆ ಎಂದು ನನಗನ್ನಿಸುತ್ತದೆ. ಕಿವಿಯಲ್ಲಿ ಊದುವ ಬದಲು ಅವರು ನನ್ನ ಕಣ್ಣಿನಲ್ಲಿ ಊದಿದ್ದರೆ, ನನಗೆ ಕಣ್ಣುಗಳು ಚೆನ್ನಾಗಿ ಕಾಣಿಸುತ್ತಿದ್ದವು. ಈಗ ನನ್ನ ಕಣ್ಣುಗಳು ಚೆನ್ನಾಗಿ ಕಾಣಿಸುವುದಿಲ್ಲ. ಮುಕುಂದಪುರದ ವೃದ್ಧ ಶಿವನು[೨] ನನಗೆ ಕನಸಿನಲ್ಲಿ ಹೇಳಿದ್ದ: ''ನಾನು ಯಾವ ವಸ್ತುವಾಗಿದ್ದೇನೋ, ರಾಮಕೃಷ್ಣನೂ ಅದೇ ಪದಾರ್ಥ. ಶಾರದಾ-ದುರ್ಗಾ-ಕಾಳಿ, ಜಗದ್ಧಾತ್ರಿ- ಎಲ್ಲವೂ.''

---

೨ ಮುಕುಂದಪುರದ ಈ ವೃದ್ಧ ಶಿವನ ಮಂದಿರದಲ್ಲಿ ಚಂದ್ರಮಣೀದೇವಿ ಹುಚ್ಚ ಗದಾಧರನ (ಶ್ರೀರಾಮಕೃಷ್ಣರ) ಆರೋಗ್ಯಕ್ಕಾಗಿ 'ಹತ್ಯಾ' ಹರಕೆ ಹೊತ್ತಿದ್ದಳು. ಎರಡು ದಿನಗಳ ನಂತರ ಆಕೆ ಕನಸಿನಲ್ಲಿ ದೇವಾಧಿದೇವ ಶಿವನ ದರ್ಶನ ಪಡೆದಿದ್ದಳು. ಶಿವ ಹೇಳಿದ್ದ: ''ನಿನ್ನ ಮಗ ಹುಚ್ಚನಾಗಿಲ್ಲ. ದೈವೀ ಉನ್ಮಾದದಿಂದ ಅವನಿಗೆ ಈ ಅವಸ್ಥೆ ಉಂಟಾಗಿದೆ.'' ಶಿವನ ಆದೇಶದಿಂದ ಸಮಾಧಾನ ಹೊಂದಿದ ಚಂದ್ರಮಣೀ ದೇವಿ ಮನೆಗೆ ಮರಳಿದ್ದಳು. ಇದಕ್ಕೆ ಹಿಂದೆ ಯಾರೂ ವೃದ್ಧ ಶಿವನ ಮಂದಿರದಲ್ಲಿ ಯಾವುದೇ ಬಯಕೆಯಿಂದ ಹರಕೆ ಹೊತ್ತಿರಲಿಲ್ಲ. ಚಂದ್ರಮಣಿಯ ಹರಕೆಯ ನಂತರ ಇತರರೂ ಹಾಗೆ ಮಾಡಲು ಆರಂಭಿಸಿದರು. *(-ಸಂ.)*

**ತ್ವಂ ಶಕ್ತಿರೇವ ಜಗತಾಮಖಿಲಪ್ರಭಾವಾ**
**ತ್ವಂ ನಿರ್ಮಿತಂ ಚ ಸಕಲಂ ಖಲು ಭಾವ ಮಾತ್ರಮ್ ।**
**ತ್ವಂ ಕ್ರೀಡಸೇ ನಿಜವಿನಿರ್ಮಿತಮೋಹಜಾಲೇ**
**ನಾಟ್ಯೇ ಯಥಾ ವಿಹರತೇ ಸ್ವಕೃತೇ ನಟೋ ವೈ ॥**

ಜಗತ್ತುಗಳಿಗೆ ಎಲ್ಲವನ್ನೂ ಸಾಧಿಸುವ ಶಕ್ತಿಯು ನೀನೇ; ಸೃಷ್ಟಿಸಲ್ಪಟ್ಟ ಸಕಲವೂ ನೀನೇ; ತಾನೇ ನಿರ್ಮಿಸಿದ ನಾಟ್ಯದಲ್ಲಿ ನಟನು ಕುಣಿಯುವಂತೆ ಸ್ವನಿರ್ಮಿತವಾದ ಮೋಹಜಾಲದಲ್ಲಿ ನೀನೇ ಕ್ರೀಡಿಸುತ್ತಿರುವೆ.

— ದೇವೀಭಾಗವತ

ಶ್ರೀಮಾತೆಯವರು ಅದೇ ಆಗಿದ್ದರು. ಠಾಕೂರ್ ಕೂಡ ಕೈಲಾಸಪತಿ ಶಿವನೇ ಆಗಿದ್ದರು. ಈಗಲೂ ನನಗೆ ಕನಸಿನಲ್ಲಿ ಠಾಕೂರರು ಹಾಗೂ ಶ್ರೀಮಾತೆ ದರ್ಶನ ನೀಡುತ್ತಾರೆ. ಆ ಕಾರಣದಿಂದಲೇ ಈ ಶಿಥಿಲ, ವಿಕಲ ಶರೀರವನ್ನು ಹೊಂದಿ ಕೂಡ ನಾನು ಅಸಾಧಾರಣವಾದ ಆನಂದದಿಂದಿದ್ದೇನೆ. ನಾನು ಬಡ ಮನುಷ್ಯಳು; ಬಾಲವಿಧವೆ. ಆದರೆ ಶ್ರೀಮಾತೆಯವರ ಆಶೀರ್ವಾದದಿಂದ ನನಗೆ ಎಂದಿಗೂ, ಯಾವುದೇ ರೀತಿಯ ಕಷ್ಟ , ಕೊರತೆ ಉಂಟಾಗಿಲ್ಲ. ಶ್ರೀಮಾತೆಯವರು ದೇಹತ್ಯಾಗ ಮಾಡಿದ ನಂತರ, ನನ್ನನ್ನು ಅವರ ಮಡಿಲಿನಲ್ಲೇ ಇರಿಸಿಕೊಂಡಿರುವಂತೆ ನನಗನ್ನಿಸುತ್ತಿದೆ. ಕೆಲವೇ ದಿನಗಳ ಮೊದಲು ದೇಹ ಮರಗಟ್ಟಿದಂತಾಗಿತ್ತು. ಠಾಕೂರರು ಕನಸಿನಲ್ಲಿ ನನಗೆ ಹೇಳಿದ್ದರು: ''ನಿನಗೆ ಯಾವುದರ ಕೊರತೆಯೂ ಉಂಟಾಗದು. ನಿನ್ನ ತಾಯಿ (ಶ್ರೀಮಾತೆ) ನಿನ್ನನ್ನು ನೋಡಿಕೊಳ್ಳುವಳು. ಕೊನೆಗಾಲದಲ್ಲಿ ಬಂದು ನಿನ್ನನ್ನು ಕರೆದುಕೊಂಡು ಹೋಗುವಳು.'' ನನ್ನನ್ನು ಕರೆದು ಕೊಂಡು ಹೋಗಲು ಅವರು ಯಾವಾಗ ಬರುವರೋ — ಈ ನಿರೀಕ್ಷೆಯೊಂದಿಗೆ ನಾನು ದಿನವೆಣಿಸುತ್ತಿದ್ದೇನೆ. ಅವರು ಬರುವ ದಾರಿಯನ್ನೇ ನೋಡುತ್ತ ಕುಳಿತಿದ್ದೇನೆ.

***(ಬರಹಕ್ಕೆ ಇಳಿಸಿದವರು:** ಅಧ್ಯಾಪಕ ತಡಿತ್‌ಕುಮಾರ್ ಬಂದೋಪಾಧ್ಯಾಯ, ಉತ್ತರಪಾರ, ಹುಗ್ಲಿ ; ದೇವಶಿಷ್ ಮಹಂತ, ಗೋಲ್ ಪಾರ್ಕ್, ಕಲ್ಕತ್ತಾ; ಹಾಗೂ ಸಲಿಲ್ ಮುಖೋಪಾಧ್ಯಾಯ, ಡಾಂಕೂನಿ, ಹುಗ್ಲಿ.)*

## ಮಹಾತ್ಮರ ಪ್ರಾರ್ಥನೆಯ ಬಲ

**ಬೇ**ಲೂರು ಮಠದಲ್ಲಿ ಶ್ರೀರಾಮಕೃಷ್ಣರ ಜಯಂತಿ ಆಚರಣೆ ನಡೆದ ಬಳಿಕ, ಮುಂದಿನ ಭಾನುವಾರದಂದು 'ಸಾರ್ವಜನಿಕ ಉತ್ಸವ' ನಡೆಯುತ್ತದೆ. ಅದರಲ್ಲಿ ಸಹಸ್ರಾರು ಜನರು ಪಾಲ್ಗೊಳ್ಳುತ್ತಾರೆ. ಈ ಬಾರಿ ಹಿಂದಿನ ದಿನ ಜಡಿಮಳೆ ಸುರಿದಿತ್ತು . ಅಡುಗೆಶಾಲೆಗೂ ನೀರು ನುಗ್ಗಿತ್ತು . ಹಿರಿಯ ಸಾಧುಗಳಿಗೆಲ್ಲ ಚಿಂತೆಯುಂಟಾಗಿ, ಈ ಬಗ್ಗೆ ಸ್ವಾಮಿ ಶಿವಾನಂದರ ಬಳಿ ಅರಿಕೆ ಮಾಡಿಕೊಂಡರು. ಅವರು ಏನೂ ಮಾತನಾಡದೆ, ಜಪಮಾಲೆಯೊಂದಿಗೆ ದೇವಾಲಯಕ್ಕೆ ಹೋದರು. ಸ್ವಲ್ಪ ಹೊತ್ತಿನ ನಂತರ ಹೊರಬಂದು, ಬೆಳಗುತ್ತಿದ್ದ ಮುಖದೊಂದಿಗೆ ನಸುನಗುತ್ತ ಭಾಗವತದ ಶ್ಲೋಕವೊಂದನ್ನು ಪಠಿಸಿದರು: ''ಹೇ ಭಗವಂತ! ನೀನು ವಿಷಜಲದಿಂದಲೂ, ಕ್ರೂರ ಮೃಗ, ರಾಕ್ಷಸರಿಂದಲೂ, ಜಡಿ ಮಳೆ-ಬಿರುಗಾಳಿ -ಮಿಂಚು ಗುಡುಗುಗಳಿಂದಲೂ, ಶತ್ರುಗಳಿಂದಲೂ ರಕ್ಷಿಸಿರುವೆ!'' ಬಳಿಕ ಭರವಸೆ ನೀಡುತ್ತ , ''ಎಂದಿನಂತೆ ಉತ್ಸವಕ್ಕೆ ಎಲ್ಲ ಸಿದ್ಧತೆ ಮಾಡಿರಿ. ಅವನ ಕೃಪೆಯಿಂದ ಎಲ್ಲವೂ ಸರಿಯಾಗುವುದು'' ಎಂದರು.

ಆಶ್ಚರ್ಯ! ಮೋಡ ತಿಳಿಯಾಗಿ ಬಿಸಿಲು ಹಬ್ಬಿತು. ಉತ್ಸವವು ನಿರಾತಂಕವಾಗಿ ನೆರವೇರಿತು.